# ಅಕ್ಕರವು ಸಾಕೆ?

ಉಪನಿಷತ್ತು ಎರಡು ಬಗೆಯ ವಿದ್ಯೆಗಳನ್ನು ಹೇಳಿತು. ಮೊದಲನೆಯದು ಪರಾವಿದ್ಯೆ. ಎರಡನೆಯದು ಅಪರಾವಿದ್ಯೆ. 'ವಿದ್ಯೆ' ಎಂಬುದು 'ವಿದ್' ಧಾತುವಿನಿಂದ ಹುಟ್ಟಿದ ಪದ. ಇದಕ್ಕೆ ಜ್ಞಾನ, ತಿಳಿವಳಿಕೆ ಎಂದರ್ಥ. ಪ್ರಾಚೀನರು ಪರಾವಿದ್ಯೆಗೆ ಪ್ರಾಮುಖ್ಯತೆ ನೀಡಿದ್ದರೂ ಅಪರಾವಿದ್ಯೆಯನ್ನು ಪರಿಗಣಿಸದೆ ಇರಲಿಲ್ಲ. ನಮ್ಮ ಬದುಕಿಗೂ ವೈಯಕ್ತಿಕ ಬಾಳ್ವೆಗೂ ಬೇಕಾದ ಹದಿನೆಂಟು ವಿದ್ಯೆಗಳನ್ನು ಭಾರತಶಾಸ್ತ್ರ ಹೇಳಿತು. ಪ್ರಾಚೀನರು ಬ್ರಹ್ಮಜ್ಞಾನಕ್ಕೆ ಸಾಧನವಾದದ್ದನ್ನು ವಿದ್ಯೆ ಎಂದು ಹೇಳಿ, ಮೋಕ್ಷಕ್ಕೆ ಸಾಧನವಾದುದು 'ಪರಾವಿದ್ಯೆ' ಎಂದರು. ನಾಲ್ಕು ವೇದ ಮತ್ತು ಆರು ವೇದಾಂಗಗಳನ್ನು 'ಅಪರಾ' ಎಂದರು. ನಮ್ಮ ಬದುಕಿಗೆ ಇವೆರಡೂ ಬೇಕು. ಪ್ರಾಚೀನರು ಪರಾ–ಅಪರಾ ಎರಡೂ ವಿದ್ಯೆಗಳನ್ನು ಅಪ್ಪಿಕೊಂಡರು. ನ್ಯಾಯಶಾಸ್ತ್ರವು ವಿದ್ಯೆಯನ್ನು ನಾಲ್ಕಾಗಿಸಿತು. ನ್ಯಾಯವಿದ್ಯೆಯು ಆನ್ವೀಕ್ಷಿಕಿಯೆಂದೂ ವೇದವಿದ್ಯೆಯು 'ತ್ರಯೀ' ಎಂದೂ ನೀತಿಶಾಸ್ತ್ರವು 'ವಾರ್ತೆ' ಎಂದೂ ಅರ್ಥಶಾಸ್ತ್ರವು 'ದಂಡನೀತಿ'ಯೆಂದೂ ಪ್ರಾಚೀನರು ಪರಿಗಣಿಸಿದರು. ಆದರೆ, ಪುರಾಣಗಳು ಹದಿನಾಲ್ಕು ವಿದ್ಯೆಗಳನ್ನು ಹೇಳಿದವು. ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ, ಚತುರ್ವೇದ, ಷಡಂಗಗಳು. ಇವುಗಳ ಜೊತೆಗೆ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರ ಸೇರಿದರೆ ಹದಿನೆಂಟು ವಿದ್ಯೆಗಳಾದವು. ಹದಿನೆಂಟು ನಮಗೆ ಪ್ರಿಯವಾದ ಸಂಖ್ಯೆ. ವಿದ್ಯೆಯ ಮಹತ್ವ 18ರಲ್ಲಿ ಅಂತರ್ಗತವಾಗುತ್ತದೆ. ವಿಷ್ಣುಪುರಾಣ, ಭರ್ತೃಹರಿಯ ನೀತಿಶತಕ ಮುಂತಾದ ಗ್ರಂಥಗಳಲ್ಲಿ ವಿದ್ಯೆಯ ಮಹತ್ವ ತಿಳಿಸಲಾಗಿದೆ.

ಪ್ರಾಚೀನ ಭಾರತದಲ್ಲಿ ವಿದ್ಯೆಯನ್ನು ಕಲಿಸುವುದೇ 'ಉತ್ತಮದಾನ'ವೆಂದು ಪರಿಗಣಿತವಾಗಿತ್ತು. ವಿದ್ಯಾಭ್ಯಾಸ ಇಲ್ಲದವ ಧರ್ಮ–ಅಧರ್ಮಗಳ ಸ್ವರೂಪ ತಿಳಿಯಲಾರ. ಆದುದರಿಂದ ವಿದ್ಯಾವಂತ ಆಗಬೇಕು. ತಾನು ಕಲಿತ ವಿದ್ಯೆಯನ್ನು ಹೇಳುವುದರ ಮೂಲಕ ಜನರನ್ನು ಪ್ರಬುದ್ಧರನ್ನಾಗಿ ಮಾಡಬೇಕು ಎಂಬುದೇ ವಿದ್ಯೆಯ ಮೂಲೋದ್ದೇಶವಾಗಿತ್ತು. ಅದಕ್ಕಾಗಿ ಗುರುಮನೆಗಳು, ವಿದ್ಯಾಶಾಲೆಗಳು, ವಿದ್ಯಾಲಯಗಳು ಹೆಚ್ಚಾದವು. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ 'ಘಟಿಕಾಸ್ಥಾನ'ಗಳು ಇದ್ದವು. ಅಲ್ಲಿಂದ ವಿದ್ಯಾವಂತರು ಬಂದರು; ವಿದ್ಯಾವೃದ್ಧರೂ ಹೆಚ್ಚಾದರು. ವಯಸ್ಸಿನಿಂದ ಕಿರಿಯನಾದರೂ ವೇದಾಧ್ಯಯನ ಮತ್ತು ಶಾಸ್ತ್ರಾಧ್ಯಯನ ಸಂಪನ್ನನಾದವನು 'ವಿದ್ಯಾವೃದ್ಧ' ಎನಿಸಿಕೊಂಡನು. ಕಿವಿಯಿಂದ ಕೇಳಿ ಮನನ ಮಾಡಿಕೊಂಡವರು 'ವಿದ್ಯಾವಂತ' ಎಂದೆನಿಸಿಕೊಂಡರು. ಸಂಸ್ಕೃತಿಯ ಪ್ರಾರಂಭವು ಶ್ರಾವಣದಿಂದಲೇ. ಅನಂತರ ನಾಗರಿಕತೆ, ನಗರೀಕರಣದಲ್ಲಿ ಮನುಷ್ಯ ಸೇರಿಕೊಂಡಾಗ ಅಕ್ಷರವಂತನಾದ. ವಿದ್ಯೆ ಮೊದಲು ಅನಂತರ ಅಕ್ಷರವಷ್ಟೆ? ಭಾಷೆ ಮೊದಲು ನಂತರ ವ್ಯಾಕರಣ.

ವಿದ್ಯೆ ಎಂದರೆ ಕೇವಲ ಓದುಬರಹ ಮಾತ್ರವಲ್ಲ. ಪ್ರತಿಯೊಬ್ಬನಲ್ಲಿರುವ ಕೌಶಲ್ಯವೂ ವಿದ್ಯೆಯ ಒಂದು ಭಾಗ. ಕೌಶಲ್ಯವು ವಂಶಪಾರಂಪರ್ಯವಾಗಿದ್ದರೂ ಆಸಕ್ತರು ತಮಗೆ ಬೇಕಾದ್ದನ್ನು ಕಲಿಯಲು ಅವಕಾಶಗಳಿದ್ದವು. ಪ್ರತಿಯೊಂದು ವಿದ್ಯೆಯೂ ಸಮಾಜ ಸಮಷ್ಟಿ ಹಿತಕ್ಕೆ ಕಾರಣವಾಗಬೇಕೆಂಬ ಸಾಮಾಜಿಕ ಅಭೀಪ್ಸೆ ಇದರ ಜತೆಜತೆಗೆ ಬೆಳೆದು ಬಂದಿತ್ತು. ಪ್ರತಿಯೊಂದು ಕೆಲಸವೂ ಪವಿತ್ರವೇ. ಇದು ಮೇಲಲ್ಲ; ಅದು ಕೀಳಲ್ಲ. ಇಂಥದೊಂದು ಅಪೂರ್ವ ಸಾಂಗತ್ಯ ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಚನೆಯ ಹಿಂದಿನ ಉದ್ದೇಶವಾಗಿತ್ತು. ಅನಂತರ ಜನರ ಭಾವನೆಗಳು ಸಂಕುಚಿತಗೊಂಡಂತೆ ವಿದ್ಯೆಗಳಲ್ಲಿಯೂ ಮೇಲು ಕೀಳು ಎಂಬ ಪರಿಕಲ್ಪನೆಗಳೂ ಭಾವನೆಗಳೂ ಬೆಳೆದವು. ನಾವು ಇಂದು ಅಕ್ಷರವಿದ್ಯೆಗೆ ದಾಸರಾಗಿಬಿಟ್ಟಿದ್ದೇವೆ. 'ವಿದ್ಯೆ'ಯ ನೈಜಬೆಲೆಯನ್ನು ತಗ್ಗಿಸಿ ವಾಣಿಜ್ಯೀಕರಣದ ಹಿಂದೆ ಓಡುತ್ತಿರುವಾಗ 'ವಿದ್ಯೆ'ಗೆ ಎಲ್ಲಿಯ ಬೆಲೆ? ವಿದ್ಯೆ ಬೆಳೆದರೆ, ನಾವು ಅದನ್ನು ಬೆಳೆಸಿದರೆ ಸಂಸ್ಕೃತಿ ಬೆಳೆಯುತ್ತದೆ. ಸಂಸ್ಕೃತಿಯು ಬೆಳೆದರೆ, ದೇಶದ ಆಂತರಂಗಿಕ ಶಕ್ತಿ ಬೆಳೆಯಲು ಸಾಧ್ಯವಾಗುತ್ತದೆ. ಇಂದು ವಿದ್ಯೆ ವ್ಯಾಪಾರೀಕರಣವಾಗಿದೆ; ಬಲವಂತದಿಂದ ಅಕ್ಷರವನ್ನು ಹೇಳಿಕೊಡುತ್ತಿದ್ದೇವೆ. ಅದಕ್ಕಾಗಿ ಕೋಟಿಗಟ್ಟಲೆ ಹಣವನ್ನು ಸರ್ಕಾರ–ಸಂಸ್ಥೆಗಳು ಖರ್ಚು ಮಾಡುತ್ತಿವೆ! ಶಿಕ್ಷಣ ಇಲಾಖೆ ಹತ್ತಾರು ಯೋಜನೆಗಳನ್ನು ರೂಪಿಸುತ್ತಿದೆ. 'ವಿದ್ಯಾವಂತ'ರಾಗುವುದಕ್ಕಿಂತ 'ಅಕ್ಷರವಂತ' ಆದರೆ ಸಾಕೆಂಬ ಧಾವಂತ ನಮ್ಮದಾಗಿದೆ. ಎಲ್ಲ ಕಾಲದಲ್ಲೂ ವಿದ್ಯಾವಂತರಿದ್ದರು. ಅವರು ವಿದ್ಯೆಗೆ ಬೆಲೆ ನೀಡುತ್ತಿದ್ದರು. ಅಕ್ಷರವಿದ್ಯೆಯಾದರೂ ಸರಿ; ಮೇಟಿವಿದ್ಯೆಯಾದರೂ ಸರಿ. ಪ್ರತಿಯೊಂದು ಸಮುದಾಯವೂ ತನಗೆ ಬರುತ್ತಿದ್ದ 'ಜ್ಞಾನ'ವನ್ನು ಅಪ್ಪಟವಾಗಿ ಬಳಸುತ್ತಿತ್ತು. ಅದರಿಂದ ಸಮಾಜಕ್ಕೆ ಉಪಕಾರವಾಗುತ್ತಿತ್ತು. ಅಂಥ ವಿದ್ಯಾವಂತರ ಸಮೂಹದಿಂದ ಸಮಾಜವು ಸದಾ ಕಳಕಳಿಯಾಗಿತ್ತು: ಅಂಥವರ ಮುಖ ಯಾರಿಗಾದರೂ ಗೌರವವನ್ನೂ ಪ್ರೀತಿಯನ್ನೂ ತಂದು ಕೊಡುತ್ತದೆಯಷ್ಟೆ? ಅಂಥವರು ವಿನಯದಿಂದ ವಿದ್ಯೆಯನ್ನು ಸಂಪಾದಿಸುತ್ತಿದ್ದರು; ವಿದ್ಯೆಯಿಂದ ವಿನಯವೂ ಮೈಗೂಡುತ್ತಿತ್ತು. ಅದು ಅವರ ಭಾವನೆಯಲ್ಲಿ, ಮಾತಿನಲ್ಲಿ ಸದಾ ವ್ಯಕ್ತವಾಗುತ್ತಿತ್ತು. ಅದಿಲ್ಲದಿರುವಾಗ ಅಂಥವರ ಮುಖವು 'ಹಾಳೂರಿನ ಹದ್ದಿನಂತೆ' ಇರುತ್ತಿತ್ತೆಂದು ಒಂದೆಡೆ ಸರ್ವಜ್ಞ ಹೇಳಿದ್ದಾನೆ.

ವಿದ್ಯೆ ಲೌಕಿಕ ತಿಳಿವಳಿಕೆಗೂ ಬೇಕಾಗಿರುತ್ತಿತ್ತು; ಅಲೌಕಿಕ ತಿಳಿವಳಿಕೆಗೂ ಬೇಕಾಗುತ್ತಿತ್ತು. 'ನ ಹಿ ಜ್ಞಾನೇನ ಸದೃಶಂ' ಎಂಬ ಪ್ರಸಿದ್ಧೋಕ್ತಿಯು ಎರಡೂ ಬಗೆಯನ್ನು ಪ್ರತಿಮಿಸುತ್ತದೆ. 'ವಿದ್ಯಾಯಾಂ ಅಮೃತಮಶ್ನುತೇ' ಎಂಬ ಮಾತನ್ನು ಇಲ್ಲಿ ನಾವು ಜಪ್ಪಿಸಬಹುದು. ವಿದ್ಯೆಯು ಲೋಕಕ್ಕೆ ಅಮೃತವೇ ಸರಿ. ಅದು ಇಹಕ್ಕೂ ಪರಕ್ಕೂ ಬೇಕು. ವಿದ್ಯೆ ಸಾಧಿತವಾಗಲು 'ಗುರು'ವಿನ ಮಾರ್ಗದರ್ಶನ ಬೇಕು. ಸರ್ವಜ್ಞನು ತನ್ನೊಂದು ವಚನದಲ್ಲಿ 'ಅಕ್ಕರವು ತರ್ಕಕ್ಕೆ, ಲೆಕ್ಕವು ಗಣಿತಕ್ಕೆ, ಮಿಕ್ಕ ಓದುಗಳು ತಿರಿಪೆಗೆ, ಮೋಕ್ಷಕೆ ಆರಕ್ಕರವೆ ಸಾಕು' (84) ಎನ್ನುತ್ತಾನೆ. ಪ್ರತಿಯೊಂದು ಲೋಕವಿದ್ಯೆಯೂ ಹೊಟ್ಟೆ ತುಂಬಿಸುತ್ತದೆ ನಿಜ. ಅದು ಜೀವನಕ್ಕೆ ಬೇಕೇ ಬೇಕು. ಆದರೆ, ಇದಿಷ್ಟೆ ಸಾಕೆ? ಹಣಗಳಿಕೆಗೆ ಲೌಕಿಕವಿದ್ಯೆ ಬೇಕಾದರೆ; ತನ್ನನ್ನು ತಾನು ತಿಳಿಯಲು ಅಧ್ಯಾತ್ಮವಿದ್ಯೆ ಬೇಡವೆ? ಲೋಕವಿದ್ಯೆಯು ಅಧ್ಯಾತ್ಮವಿದ್ಯೆಗೆ ಮೆಟ್ಟಿಲು. ಇದು ಆರೋಹಣ ಕ್ರಮ! ಆದರೆ, ನಾವು ಇತ್ತ ಆರೋಹಣವೂ ತಿಳಿಯದೆ; ಅತ್ತ ಅವರೋಹಣದಲ್ಲಿಯೇ ಉಳಿದು ಎಡಬಿಡಂಗಿಗಳಾಗುತ್ತಿದ್ದೇವೆ. ಇದು ಆಧುನಿಕ ಅಕ್ಕರ ವಿದ್ಯೆಯ ವಿಷಮ ಪರಿಸ್ಥಿತಿಯಾಗಿಬಿಟ್ಟಿದೆ. ನಮ್ಮ ಮುಖಕ್ಕೆ ಹಿಡಿದ ಕನ್ನಡಿ ಇದಾಗಿದೆ.

■ **ಪುರಂಜೀವಿ**

## ಮಾತೇ ಮುತ್ತು

- ದುಃಖವಾದಾಗ, ನೋವಾದಾಗ ಈ ಪ್ರಪಂಚದಲ್ಲಿ ತನಗಿಂತ ದುಃಖಪಡುವವರೂ, ನೋವು ಪಡುವವರೂ ಇರುವರೆಂದು ಮನಸ್ಸಿಗೆ ಸಮಾಧಾನ ತಂದುಕೊಳ್ಳಬೇಕು.
  —ಕೆ.ವಿ. ಅಯ್ಯರ್
- ಶಿಸ್ತಿನ ಬಹುಮತವೇ ಸತ್ಯದ ಅಪಾಯಕಾರಿ ಶತ್ರು.
  —ಇಬ್ಸೆನ್
- ಕಡಿಮೆ ಕಾನೂನುಗಳು, ಕಡಿಮೆ ಕೇಂದ್ರೀಕೃತ ಅಧಿಕಾರ, ಕಡಿಮೆ ಆಳುವ ಸರ್ಕಾರ ಇದ್ದಂತೆಲ್ಲ ಜನರಿಗೆ ಒಳ್ಳೆಯದು.
  —ಎಮರ್ಸನ್
- ಆದರ್ಶ ದಂಪತಿಯಾಗಿರುವುದು ಆದರ್ಶ ಸನ್ಯಾಸಿ ಆಗುವುದಕ್ಕಿಂತ ಕಷ್ಟ.
  —ಸ್ವಾಮಿ ವಿವೇಕಾನಂದ
- ನಮ್ಮ ಧರ್ಮಗುರುಗಳು ನಮ್ಮನ್ನು ಕೂಡಿ ಬಾಳಲು ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?
  —ಸಿದ್ದೇಶ್ವರ ಸ್ವಾಮಿ
- ತಮಗೆ ತಾವೇ ಸಹಾಯ ಮಾಡಿಕೊಳ್ಳುವವರಿಗೆ ದೇವರೂ ಸಹಾಯ ಮಾಡುತ್ತಾನೆ.
  —ಈಸೋಪ